SUNIL
AGRO
FOODS LIMITED

**SUNIL AGRO FOODS LIMITED**
Corporate Office:
1/104, Ahuja Chambers, Kumara Krupa Road,
Bengaluru - 560001 ; T: 080 2225 1555 / 1666
E-mail : info@sunilagro.in

Factory & Registered Office:
Plot 39/A2, Chokkahalli, Hosakote Industrial Area,
Hosakote - 562114 ; T: 080 27971371/ 463 E-mail :
billing@sunilagro,in

CIN No : L01111KA1988PLC008861
www.sunilagro.in

Date: 10.02.2025

To

The Manager
Listing Department
**BSE Limited**
P.J. Towers, Dalal Street
Mumbai – 400001

Dear Sir,

**Sub: Announcement under Regulation 30 (LODR) – Intimation of the Newspaper Advertisement of the Unaudited Results for the quarter ended 31st December 2024.**

With reference to the above subject, please find enclosed copies of the Newspaper advertisement of the Unaudited Financial Results for the 3rd Quarter and Nine months ended 31st December, 2024, published in Financial Express and Sanjevani.

Kindly take the same on record and treat this as a compliance under SEBI (Listing Obligations and Disclosure Requirement) Regulations, 2015.

Thanking you

Yours faithfully
**For Sunil Agro Foods Limited**

SHAILA A BEVINAKATTI
Digitally signed by SHAILA A BEVINAKATTI
Date: 2025.02.10 14:20:31 +05'30'

Shaila A B
Company Secretary and Compliance Officer
Encl. as above

# ಕೆರರೆಗಳ ಸ್ವರೂಪ ಹಾಳು ಗುತ್ತಿಗೆದಾರರ ವಿರುದ್ಧ ಕ್ರಮಕ್ಕೆ ಅಗ್ರಹ



ಕೋಲಾರ,ಫೆ.9:ಜಿಲ್ಲಾಧಿಕಾರಿಗಳ ಆದೇಶವನ್ನು ಗಾಳಿಗೆ ತೂರಿ ಕೆರೆಯ ಸ್ವರೂಪವನ್ನೇ ಹಾಳು ಮಾಡಿರುವ ಚೈನ್ನೈ ಕಾರಿಡಾರ್ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಂಡು ದೂಳಿನಿಂದ ರಸ್ತೆಯ ಅಕ್ಕಪಕ್ಕದಲ್ಲಿ ನಷ್ಟವಾಗಿರುವ ರೈತರ ಪ್ರತಿ ಎಕರೆಗೆ 5 ಲಕ್ಷ ಪರಿಹಾರ ನೀಡುವಂತೆ ರೈತ ಸಂಘದಿಂದ ಸಣ್ಣ ನಿರಾವರಿ ಇಲಾಖೆ ಅಧಿಕಾರಿಯಾದ ಹರಿಕೃಷ್ಣರವರಿಗೆ ಮನವಿ ನೀಡಿ ಆಗ್ರಹಿಸಲಾಯಿತು.

ಚೈನ್ನೈ ಕಾರಿಡಾರ್ ರಸ್ತೆಕಾಮಗಾರಿ ಮುಗಿಯುವ ಹಂತ ತಲುಪಿದ್ದು ಗುತ್ತಿಗೆದಾರರ ನಿರ್ಲಕ್ಷದಿಂದ ಹಾಳಾಗಿರುವ ಕೆರೆಗಳನ್ನು ಪರಿಶೀಲನೆ ಮಾಡಬೇಕಾದ ಗಣಿ ಇಲಾಖೆ ಅಧಿಕಾರಿಗಳು ಕಛೇರಿಯಲ್ಲಿಯೇ ಕುಳಿತು ಪರಿಶೀಲನಾ ವರದಿಯ ಕಡತ ಸೃಷ್ಠಿ ಮಾಡಿ ನಿರೀಕ್ಷಾಪಣೆಯ ನೀಡಿರುವುದು ದುರಾದೃಷ್ಠಕರ ವಿಚಾರ ಎಂದು ರೈತ ಸಂಘದ ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣಗೌಡ ಅವ್ಯವಸ್ಥೆ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ರಸ್ತೆ, ಕೈಗಾರಿಕೆ ಅಭಿವೃದ್ದಿ ಹೆಸರಿನಲ್ಲಿ ರೈತರ ಕೃಷಿ ಜಮೀನನ್ನು ಬಲವಂತದಿಂದ ಕಾನೂನಿನ ಭಯ ಹುಟ್ಟಿಸಿ. ವಶಪಡಿಸಿಕೊಂಡು ಪರಿಹಾರ ನೀಡದೇ ಕಛೇರಿಗೆ ಅಲೆದಾಡಿಸುವುದು ಒಂದು ಕಡೆಯಾದರೆ ಮತ್ತೊಂದು ಕಡೆ ಜಲ ಮೂಲಗಳ ಜೀವನಾಡಿಯಾದ ಕೆರೆಗಳನ್ನು ಚೆನ್ನೈ ಕಾರಿಡಾರ್ ಹೈವೆ ಅಭಿವೃದ್ದಿ ಗುತ್ತಿಗೆದಾರರು ಸಂಪೂರ್ಣವಾಗಿ ತಮಗೆ ಇಷ್ಟಬಂದ ರೀತಿ ಮಣ್ಣು ತೆಗೆಯುವ ಮೂಲಕ ಕೆರೆಗಳನ್ನು ಹಾಳು ಮಾಡುತ್ತಿದ್ದರು ಅದನ್ನು ತಡೆಯಬೇಕಾದ ಅಧಿಕಾರಿಗಳು ನಾಪತ್ತೆಯಾಗಿದ್ದಾರೆಂದು ಕಿಡಿ ಕಾಡಿದರು.

ಜಿಲ್ಲಾಧ್ಯಕ್ಷ ಈಕಂಬಳ್ಳಿ ಮಂಜುನಾಥ ಮಾತನಾಡಿ ಗುತ್ತಿಗೆದಾರರ ಬೇಜವಾಬ್ದಾರಿಯಿಂದ ಅಕ್ಕಪಕ್ಕದ ರೇಷ್ಮೆ ಟೆಮೊಟೋ ಕ್ಯಾಪ್ಸಿಕಂ ಹೂ ಬೆಳೆಗಳು ಧೂಳಿಗೆ ಸಂಪೂರ್ಣ ನಾಶವಾಗುತ್ತಿದ್ದರೂ ಗುತ್ತಿಗೆದಾರರು ಕನಿಷ್ಠ ಪಕ್ಷದ ಸೌಜನ್ಯಕಾದರು ರಸ್ತೆಯಲ್ಲಿ ನೀರನ್ನು ಸಿಂಪರಣೆ ಮಾಡುತ್ತಿಲ್ಲ. ಇದರಿಂದ ರೈತರಿಗೆ ಲಕ್ಷಾಂತರ ರೂಪಾಯಿ ನಷ್ಟ ಉಂಟಾಗುತ್ತಿದೆ. ಕೆರೆ ಸ್ವರೂಪವನ್ನು ಹಾಳು ಮಾಡುತ್ತಿರುವ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಂಡು ಕೆರೆಗಳನ್ನು ಅಭಿವೃದ್ದಿಪಡಿಸಿ ಮಳೆಗಾಲದಲ್ಲಿ ಜಾನುವಾರಗಳನ್ನು ಮತ್ತು ಅಮಾಯಕ ರೈತ ಕೂಲಿಕಾರ್ಮಿಕ ಜೀವವನ್ನು ಉಳಿಸಬೇಕೆಂದು ಮನವಿ ನೀಡಿ ಒತ್ತಾಯಿಸಿದರು.

ಮನವಿ ಸ್ವೀಕರಿಸಿ ಮಾತನಾಡಿದ ಸಣ್ಣ ನೀರಾವರಿ ಇಲಾಖೆ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಹರಿಕೃಷ್ಣರವರು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಸಂಬಂದಪಟ್ಟ ಗುತ್ತಿಗೆದಾರರು ಹಾಗೂ ಎನ್. ಹೆಚ್.ಎ.ಐ ಅಧಿಕಾರಿಗಳು ಸಭೆ ಕರೆದು ಕೆರೆಯ ಸ್ವರೂಪವನ್ನು ಹಾಳು ಮಾಡಿರುವ ಹಾಗೂ ರೈತರ ಬೆಳೆ ನಷ್ಟವಾಗಿರುವ ಸ್ಥಳವನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಗೊಂಡು ರೈತರಿಗೆ ಕೆರೆಗಳಿಗೆ ಹಾನಿಯಾಗದ ರೀತಿ ಕ್ರಮ ಕೈಗೊಳ್ಳುವ ಭರವಸೆಯನ್ನು ನೀಡಿದರು.

ಮನವಿ ನೀಡುವಾಗ ಮಹಿಳಾ ಜಿಲ್ಲಾಧ್ಯಕ್ಷೆ ಎ.ನಳಿನಿಗೌಡ, ಶಿವಾರೆಡ್ಡಿ, ಯಲ್ಲಪ್ಪ, ಕೆ.ಇ.ಬಿ ಚಂದ್ರು, ಗೀರೀಶ್, ಸುಪ್ರೀಂ ಚಲ, ಶೈಲಜ, ರತ್ನಮ್ಮ ಚೌಡಮ್ಮ, ಶೋಭ ಮಹಾಲಕ್ಷ್ಮೀ ಮುಂತಾದವರಿದ್ದರು.

# ಸಂಸ್ಕಾರವಿಲ್ಲದ ಸಾಧನೆ ವ್ಯರ್ಥ್ಯ-ಡಿಸಿಪಿ

ಕೋಲಾರ,ಫೆ.9:ಸಂಸ್ಕಾರ ಅಳವಡಿಸಿಕೊಳ್ಳದ ಜೀವನ ಸೂತ್ರ ಹರಿದ ಗಾಳಿಪಟದಂತೆ. ಏನೇ ಸಾಧನೆ ಮಾಡಿದರೂ ಪ್ರಯೋಜನ ಇಲ್ಲವಾಗುತ್ತದೆ. ಯಾವುದೇ ನೌಕರಿ ಪಡೆಯಿರಿ ಇಲ್ಲವೇ ಹಣ ಗಳಿಸಿ, ಓದಿನಲ್ಲಿ ಟಾಪರ್ ಆಗಿರಿ. ಸಂಸ್ಕಾರ ಇಲ್ಲದಿದ್ದರೆ ಅವೆಲ್ಲಾ ಶೂನ್ಯ ಎಂದು ಐಪಿಎಸ್ ಅಧಿಕಾರಿ ಹಾಗೂ ಬೆಂಗಳೂರು ಪೂರ್ವ ವಲಯ ಡಿಸಿಪಿ ಡಿ.ದೇವರಾಜ್ ಅಭಿಪ್ರಾಯಪಟ್ಟರು.

ನಗರದ ಸಹ್ಯಾದ್ರಿ ಪದವಿಪೂರ್ವ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ಶಾರದಾಪೂಜೆ ಹಾಗೂ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬರೂ ಶಿಸ್ತು ಅಳವಡಿಸಿಕೊಳ್ಳಬೇಕು. ಅದೇ ಜೀವನದ ಮೊದಲ ಯಶಸ್ಸು. ಎಲ್ಲರೂ ಓದಿರುತ್ತಾರೆ, ಕೆಲವರು ಮಾತ್ರ ಮುಂದೆ ಬರುತ್ತಾರೆ. ಶಿಸ್ತುಬದ್ಧ ಜೀವನ ಸಾಗಿಸಿದವರು ಗೆಲ್ಲುತ್ತಾರೆ ಎಂದು ಪ್ರತಿಪಾದಿಸಿದರು.

ಈಗ ಪ್ರಮುಖ ಘಟ್ಟದಲ್ಲಿ ಇದ್ದೀರಿ. ಈ ಹಂತದಲ್ಲಿ ಗುರಿ ನಿಗದಿಪಡಿಸಿಕೊಳ್ಳಬೇಕು. ನೀವು ಏನಾಗಬೇಕೆಂದು ನಿಮ್ಮ ಮನಸ್ಸಿನಲ್ಲಿ ಯೋಚನೆ ಮಾಡಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ಭಾಷಣ ಮಾಡುತ್ತಲೇ ಒಂದೆರಡು ನಿಮಿಷ ಅಧ್ಯಾಪಕರಾಗಿ ಡಿ.ಎನ್.ಎ ಫಿಂಗರ್ ಪ್ರಿಂಟ್ ಬಗ್ಗೆ ವಿದ್ಯಾರ್ಥಿಗಳಲ್ಲಿ ಪ್ರಶ್ನೆ ಕೇಳಿದರು.

ಐ.ಆರ್.ಎಸ್ ಅಧಿಕಾರಿ ಪಿ.ವಿ.ಬೈರಪ್ಪ ಮಾತನಾಡಿ, ಕೋಲಾರದ ಹೊಲ್ಲಂಬಳಿ ಗ್ರಾಮದ 40ಕ್ಕೂ ಅಧಿಕ ಮಂದಿ ಪೊಲೀಸ್ ಕಾನ್‌ಸ್ಟೇಬಲ್ ಆಗಿ ವಿವಿಧೆಡೆ ಕೆಲಸ ಮಾಡುತ್ತಿದ್ದಾರೆ. ಕಾರಣ ಒಬ್ಬರನ್ನೊಬ್ಬರು ನೋಡಿ ಪ್ರೇರೇಪಿತರಾಗುತ್ತಾರೆ. ಅಂಥ ವಾತಾವರಣವನ್ನು ನಾವೂ ಸೃಷ್ಟಿಸಿಕೊಳ್ಳಬಹುದು ಎಂದರು.

ಕೋಲಾರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ವಿ.ಗೋಪಿನಾಥ್ ಮಾತನಾಡಿ, ವೋಟಿನ ಅಸ್ತ್ರವನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಎಲ್ಲರಿಗೂ ತಂದೆಯೇ ಹೀರೊ ಆಗಬೇಕು, ತಂದೆ ತಾಯಿಯೇ ದೇವರು. ಸಂಸ್ಕಾರ ಇಲ್ಲದ ಜೀವನ ವ್ಯರ್ಥ ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲ ವಿನಯ್ ಗಂಗಾಪುರ ಸ್ವಾಗತಿಸಿದರು. ಸಹ್ಯಾದ್ರಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಉದಯಕುಮಾರ್, ಕಾಲೇಜಿನ ಕಾರ್ಯದರ್ಶಿ ಜಿ.ಎ.ಕುಲಕರ್ಣಿ, ಪದವಿ ಕಾಲೇಜಿನ ಪ್ರಾಂಶುಪಾಲ ಬಿ.ಬದ್ರಿನಾಥ್ ಇದ್ದರು. ಶಾಂಭವಿ, ವೈಭವಿ ಪ್ರಾರ್ಥಿಸಿದರು. ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

# ಧಾರ್ಮಿಕ ಕಾರ್ಯಕ್ರಮಗಳನ್ನು ಮುನ್ನೆಡಿಸಿ-ಕೆಹೆಚ್‌ಎಂ



ಚಿಕ್ಕಬಳ್ಳಾಪುರ,ಫೆ9:ಪುಣ್ಯಕಾರ್ಯಗಳಲ್ಲಿ ಭಕ್ತರು ಹೆಚ್ಚು ಹೆಚ್ಚು ಪಾಲ್ಗೊಳ್ಳುವ ಮೂಲಕ ನಮ್ಮ ಧಾರ್ಮಿಕ ಕಾರ್ಯಕ್ರಮಗಳನ್ನು ಮುನ್ನಡೆಸಬೇಕು ಈ ಮೂಲಕ ಲೋಕಕಲ್ಯಾಣಸಾಧ್ಯ ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆಎಚ್ ಮುನಿಯಪ್ಪ ಹೇಳಿದರು.

ಅವರು ಚಿಕ್ಕಬಳ್ಳಾಪುರ ತಾಲೂಕಿನ ಶ್ರೀಕ್ಷೇತ್ರ ಬಂಡಹಳ್ಳಿ ಶ್ರೀ ಆದಿಶಕ್ತಿ ಪೀಠಂ ನ ಶ್ರೀ ಆದಿಶಕ್ತಿ ಅಮ್ಮನವರ ಪುನರ್ ಪ್ರತಿಷ್ಠಾಪನಾ ದೇವಿ ದೈವಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡದ ಅವರು ಲೋಕಕಲ್ಯಾಣಕ್ಕಾಗಿ ದೈವದತ್ತ ಕಾರ್ಯಕ್ರಮಗಳು ಹೋಮ ನಡೆಸಲಾಗುತ್ತಿದೆ. ಉತ್ತಮ ಮಳೆ-ಬೆಳೆ ಆಗುವ ಮೂಲಕ ಸಕಲ ಜೀವಾತ್ಮಗಳು ಈ ಭೂಮಿ ಮೇಲೆ ಅನ್ಯನವಾಗಿ ಬದುಕಬಹುದಾಗಿದೆ ಎಂದರು. ಇದಕ್ಕೂ ಮುನ್ನ ದಿನಗಳಲ್ಲಿ ಶ್ರೀ ಕ್ಷೇತ್ರ ಬಂಡಹಳ್ಳಿ ಶ್ರೀ ಮಹಾಮಾತಾ ಚಾರಿಟಬಲ್ ಟ್ರಸ್ಟ್ ವತಿಯಿಂದ ಶ್ರೀ ಆದಿಶಕ್ತಿ ಪೀಠಂ ನ ಶ್ರೀ ಆದಿಶಕ್ತಿ ಅಮ್ಮನವರ ಪುನರ್ ಪ್ರತಿಷ್ಠಾಪನಾ ಕಾರ್ಯಕ್ರಮವು ಕಳೆದ ನಾಲ್ಕು ದಿನಗಳಿಂದ ವಿವಿಧ ಧಾರ್ಮಿಕ ಪೂಜಾಧಿಗಳನ್ನು ನಡೆಸುವ ಮೂಲಕ ಅತ್ಯಂತ ಶ್ರದ್ಧಾಭಕ್ತಿಯಿಂದ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ನೆರವೇರಿತು.

ಕಳೆದ ಬುಧವಾರದಿಂದ ಶನಿವಾರದ ವರವಿಗೆ ದೇವಾಲಯ ಆವರಣದಲ್ಲಿ ಶಿಲ್ಪ ಪೂಜಾ ಗುರು ಗಣಪತಿ ಪೂಜಾ, ದೇವತಾ ಪ್ರಾರ್ಥನೆ ತೋರಣ ಮುಹೂರ್ತ ದ್ವಜಾರೋಹಣ ಪುಣ್ಯ ವಾಚನ ನಾಂದಿ ಪೂಜೆ ಅಂಕುರಾರ್ಪಣೆ ಮೊದಲ ದಿನ ನಡೆದರೆ ಎರಡನೇ ದಿನ ಅಷ್ಟದ್ರವ್ಯ ಮಹಾಗಣಪತಿ ಹೋಮ, ಸರ್ವ ಪ್ರಾಯಶ್ಚಿತಹೋಮ, ಭೂವರಾಹ ಹೋಮ, ಶ್ರೀ ದುರ್ಗಾಹೋಮ, ಶ್ರೀ ಸೂಕ್ತಹೋಮ, ಪರುಷಸೂಕ್ತ ಹೋಮ, ಮತ್ತು ಐಕ್ಯಮತ್ಯ ಹೋಮ ನಡೆಯಿತು.

ಅದರಂತೆ ಮೂರನೇ ದಿನ ಶ್ರೀದೇವಿ ಪ್ರತಿಷ್ಠಾಪನ ಹೋಮ, ಬ್ರಹ್ಮಕಳಶ ಹೋಮ, ನವಕ ಕಲಾ ಹೋಮ, ಚಂಡಿಕಾಹೋಮ, ದೇವಿ ಅಷ್ಟಬಂಧನ ಪ್ರತಿಷ್ಠಾಪನೆ ಬ್ರಹ್ಮ ಕಲಶ ಪ್ರತಿಷ್ಠಾಪನೆ ಅಷ್ಟ ದಿಕ್ಪಾಲಕ ಪ್ರತಿಷ್ಠೆ ನಡೆಯಿತು ಇನ್ನು ನಾಲ್ಕನೇ ದಿನ ಶ್ರೀ ಸ್ವಾಮಿ ಅವರಿಗೆ ತಿರುಕಲ್ಯಾಣೋತ್ಸವ ಪ್ರಕಾರೋತ್ಸವ, ಧೂಪಾದೀಪ ನಡೆಯಿತು ಇದೇ ದಿನ ದಾನಿ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಕೋಲಾರ ಹಾಲು ಒಕ್ಕೂಟ ಮಾಜಿ ಅಧ್ಯಕ್ಷ ಕೆ ಗುಡಿಯಪ್ಪ ಇವರ ಸಹಕಾರದಿಂದ ಆನೆ ಅಂಬಾರಿ ಉತ್ಸವ ಏರ್ಪಡಿಸಲಾಗಿತ್ತು. ಇದೇ ವೇಳೆ ಜಗದೀಶ ಶಿವಾಚಾರ್ಯ ಸ್ವಾಮಿಗಳ ಅಮೃತ ಹಸ್ತದಿಂದ ಈಶಸಾರಥಿ ಬಸಪ್ಪನವರ ರಥಕ್ಕೆ ಚಾಲನೆ ನೀಡಿದರು.

ನಾಲ್ಕು ದಿನಗಳ ಪೂಜಾ ಕೈಂಕರ್ಯಗಳ ಈ ಕಾರ್ಯವನ್ನು ಶ್ರೀ ಕ್ಷೇತ್ರದ ಧರ್ಮದರ್ಶಿಗಳಾದ ಶ್ರೀ ಜಯರಾಮ ಸ್ವಾಮೀಜಿ, ತ್ರಿಕೋನ ಶಕ್ತಿಪೀಠ ಸಂಸ್ಥಾಪಕರಾದ ಶ್ರೀ ರಜನಿ ಮಾತಾಜಿ ತಿಪ್ಪೇಸ್ವಾಮಿ, ಗೋಪಾಲಪುರದ ಲಕ್ಷ್ಮೀನಾರಾಯಣಗೌಡ, ಹೆಸರಘಟ್ಟ ರತ್ನಮ್ಮ ಮತ್ತು ಅಭಿಲಾಶ್, ಹೊಸಹಳ್ಳಿಯ ಶ್ರೀಮತಿ ವಿದ್ಯಾ ಮತ್ತು ಮಂಜುನಾಥ್ ದ್ಯಾವಪ್ಪನವರು ಬಾಲಕೃಷ್ಣ ನರಸಿಂಹಪ್ಪ ಸರೋಜಮ್ಮ ಸೇರಿದಂತೆ ಶ್ರೀಕ್ಷೇತ್ರ ಬಂಡಹಳ್ಳಿಯ ಶ್ರೀ ಆದಿಶಕ್ತಿ ಪೀಠಮ್ ಆಡಳಿತ ಮಂಡಳಿ ಸದಸ್ಯರು ಮಡಿಕಲ್ ಕಾಂಗ್ರೆಸ್ ಮುಖಂಡ ಎಂಪಿ ಕುಪೇಂದ್ರ ಅಡ್ಗಲ್ ಗ್ರಾಮ ಪಂಚಾಯತ್ ಸದಸ್ಯ ಎನ್ ವಿ ಶಂಕರ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಟಿ ವಿ ರಾಜೇಶ್ ಸೇರಿದಂತೆ ಬಂಡಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

# ಕೌಶಲ್ಯದಿಂದ ನಮ್ಮನ್ನು ಹುಡುಕಿ ಬರಲಿದೆ ಹಣ



ಕೆಂಗೇರಿ.ಫೆ.9:ಜ್ಞಾನ ಹಾಗೂ ಕೌಶಲ್ಯ ಸಂಪಾದಿಸಿದರೆ ಹಣ ತಂತಾನೆ ಒದಗಿ ಬರುತ್ತದೆ. ದುಡ್ಡಿನ ಹಿಂದೆ ಓಡುವ ಅವಶ್ಯಕತೆ ಸೃಷ್ಟಿಯಾಗುವುದಿಲ್ಲ ಎಂದು ಹೈ ಕೋರ್ಟ್ ನ್ಯಾಯಮೂರ್ತಿ ವಿಜಯ್ ಕುಮಾರ್ ಎ. ಪಾಟೀಲ್ ಹೇಳಿದರು.

ಕೆ.ಎಲ್.ಇ ಪದವಿ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಅವರು ಮಾತನಾಡಿದರು. ವಕೀಲಿ ವೃತ್ತಿ ಅತ್ಯಂತ ವಿಶಿಷ್ಟ ಕ್ಷೇತ್ರವಾಗಿದೆ.

ಈ ಕ್ಷೇತ್ರವನ್ನು ಆರಿಸಿಕೊಂಡವರು ಕೌಶಲ್ಯದೊಂದಿಗೆ ಮೌಲ್ಯಗಳನ್ನು ಕಾಪಿಟ್ಟುಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ವಕೀಲಿ ವೃತ್ತಿಯಲ್ಲಿ ವಿಶ್ಲೇಷಣಾತ್ಮಕ ಕುಶಾಗ್ರಮತಿಯನ್ನು ಹೊಂದಿದವರು ಮಾತ್ರ ಯಶಸ್ವಿಯಾಗಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಎಲ್ಲಾ ವಕೀಲರು ನಿರಂತರ ಅಧ್ಯಯನ, ಕುಶಲತೆ ಹಾಗೂ ವಿಶ್ಲೇಷಣಾ ಸಾಮರ್ಥ್ಯಗಳನ್ನು ಸದಾ ಕಾಲ ಹೊಂದಲು ಸಿದ್ಧರಿರಬೇಕು ಎಂದು ತಿಳಿಸಿದರು. ಪ್ರಾಂಶುಪಾಲ ಪ್ರೊ.ಜೆ.ಎಂ. ಮಲ್ಲಿಕಾರ್ಜುನಯ್ಯ ಮಾತನಾಡಿ, ಸೋಲು ಎಂಬುದು ಜೀವನದ ಭಾಗ. ವೃತ್ತಿಪರ ಜಗತ್ತಿನಲ್ಲಿ ಆರಂಭಿಕವಾಗಿ ಸೋಲುಂಟಾದರೆ ಕುಗ್ಗಬೇಕಾಗಿಲ್ಲ. ಆರಂಭಿಕ ಸೋಲನ್ನೇ ಅನುಭವವಾಗಿ ಸ್ವೀಕರಿಸಿ. ಆಗ ಗೆಲ್ಲುವ ಅವಕಾಶ ಹಾಗೂ ಸಮಯಾವಕಾಶವೂ ಹೆಚ್ಚಿರುತ್ತದೆ ಎಂದು ತಿಳಿಸಿದರು. ಇದೇ ವೇಳೆ 104 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು

ಕರ್ನಾಟಕ ಹೈ ಕೋರ್ಟ್ ಹಿರಿಯ ವಕೀಲ ಎಸ್.ಬಸವರಾಜು, ಡಾ.ಅನಿತಾ ಉಪಸ್ಥಿತರಿದ್ದರು104 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

**ಕ್ಯಾಪ್ಷನ್** : ನ್ಯಾಯಮೂರ್ತಿ ವಿಜಯ್ ಕುಮಾರ್ ಎಪಾಟೀಲ್ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು. ಪ್ರಾಂಶುಪಾಲ ಪ್ರೊ. ಜೆ.ಎಂ.ಮಲ್ಲಿಕಾರ್ಜುನಯ್ಯ, ಹೈ ಕೋರ್ಟ್ ಹಿರಿಯ ವಕೀಲ ಎಸ್.ಬಸವರಾಜು, ಡಾ.ಅನಿತಾ ಮತ್ತಿತರರು ಉಪಸ್ಥಿತರಿದ್ದರು.

# ಫೆ10.ಸಿರಿಧಾನ್ಯ, ಸಾವಯುವ ಫಲಪುಷ್ಪ ಪ್ರದರ್ಶನ

ಬಾಗೇಪಲ್ಲಿ,ಫೆ.9:ಸಿರಿಧಾನ್ಯಗಳ ಬಗ್ಗೆ ಹೆಚ್ಚಿನ ಪ್ರಚಾರ ಮಾಡಲು ಫೆಬ್ರವರಿ 10 ರಂದು ಸರ್ಕಾರಿ ಬಾಲಕಿಯರ ಆವರಣದಲ್ಲಿ ಜಿಲ್ಲಾಮಟ್ಟದ ಸಿರಿಧಾನ್ಯ ಮತ್ತು ಸಾವಯುವ ಹಾಗೂ ಫಲಪುಷ್ಪ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕಿ ಜಿ. ಲಕ್ಷ್ಮೀ ರವರು ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಸಿರಿಧಾನ್ಯಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಜಾಗೃತ ನಡಿಗೆ, ಸಿರಿಧಾನ್ಯಗಳ ವಿವಿಧ ಬಗೆಯ ತಿಂಡಿ-ತಿನಿಸುಗಳ ಹಾಗೂ ಮರೆತು ಹೋದ ಖಾದ್ಯ ತಯಾರಿಸುವ ಸ್ಪರ್ಧೆ ಏರ್ಪಡಿಸಲಾಗಿತ್ತು.

ಇದರಲ್ಲಿ ವಿಜೇತರಾದವರು ರಾಜ್ಯಮಟ್ಟದ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಈ ಮೇಳದಲ್ಲಿ ಹಳ್ಳಿ ಸೊಗಡು ಮಾದರಿಯಲ್ಲಿ ಸಾಂಪ್ರದಾಯಿಕ ಹೂವು ಹಾಗು ಸಿರಿಧಾನ್ಯಗಳಿಂದ ಅಲಂಕೃತಗೊಂಡ ಅದಿಯೋಗಿ ಮೂರ್ತಿ ನಂದಿ ವಿಗ್ರಹ ವೀಣೆ, ಜೈ ಕಿಸಾನ್ ಜೈ ಜವಾನ್ ಕರ್ನಾಟಕ ನಕ್ಷೆ ಹಾಗೂ ದೇಸಿ ತಳಿ ಬೀಜಗಳ ಪ್ರದರ್ಶನ, ದಿಬ್ಬದಿಂದ ಕಣಿವವರೆಗೂ ಜಲಾನಯನ ಪ್ರದೇಶ, ಕೃಷಿಭಾಗ್ಯ, ನರೇಗಾ ಯೋಜನೆಯಡಿ ವಿವಿಧ ಕಾಮಗಾರಿಗಳ ಮಾದರಿಗಳ ಪ್ರದರ್ಶನ, ಕೃಷಿ ಮತ್ತು ಸಂಬಂಧಿತ ಇಲಾಖೆಗಳಿಂದ ಮಳಿಗೆಗಳನ್ನು ತೆರೆಯಲಾಗುವುದು ಕೃಷಿ ಯಂತ್ರೋಪಕರಣ ಹಾಗೂ ಸಿರಿಧಾನ್ಯ ಖಾದ್ಯಗಳ, ಔಷಧೀಯ ಸಸ್ಯಗಳ ಪ್ರದರ್ಶನ ಹಾಗೂ ಪ್ರದರ್ಶನದಲ್ಲಿ 100ಕ್ಕೂ ಹೆಚ್ಚು ಫಲಾನುಭವಿಗಳಿಗೆ ಕೃಷಿ ಪರಿಕರಗಳ ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

# ರಸ್ತೆ ಅಪಘಾತ: ವ್ಯಕ್ತಿ ಸಾವು

ಕಲಬುರಗಿ,ಫೆ9:ಸಿಗ್ನಲ್ ದಾಟುವಾಗ ಎಲೆಕ್ಟ್ರಿಕ್ ಬೈಕ್ ಲಾರಿ ಢಿಕ್ಕಿ ಹೊಡೆದು ಓರ್ವ ವ್ಯಕ್ತಿ ಮೃತಪಟ್ಟಿರುವ ಘಟನೆ ಶನಿವಾರ ರಾತ್ರಿ ಹಾಗರಗಾ ಕ್ರಾಸ್ ನಲ್ಲಿ ನಡೆದಿದೆ.

ನಗರದ ನೂರಾನಿ ಮೊಹಲ್ಲಾದ ನಿವಾಸಿ ಅಬ್ದುಲ್ ನಬಿ (65) ಮೃತ ವ್ಯಕ್ತಿ ಎಂದು ಗುರುತಿಸಲಾಗಿದೆ. ಕಟಲರಿ ವ್ಯಾಪಾರಿಯಾಗಿದ್ದ ಇವರು ಅಂಗಡಿಯ ಸಾಮಾನುಗಳನ್ನು ತೆ-ಗೆದುಕೊಂಡು ಹಾಗರಗಾ ಕ್ರಾಸ್ ನಲ್ಲಿ ಸಿಗ್ನಲ್ ದಾಟುವಾಗ ಅಪಘಾತ ಸಂಭವಿಸಿದೆ.

ತೀವ್ರಗಾಯಗೊಂಡ ವ್ಯಕ್ತಿಯನ್ನು ಆಸ್ಪತ್ರೆಗೆ ದಾಖಲಿಸುವಾಗ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ. ಕಲಬುರಗಿ ನಗರ ಸಂಚಾರಿ ಪೊಲೀಸ್ ಠಾಣೆ -2ರ ವ್ಯಾಪ್ತಿಯಲ್ಲಿ ದುರ್ಘಟನೆ ನಡೆದಿದೆ.

# ಹಾಯ್‌ಕಲ್ಪಾ ಗ್ರೂಪ್ ಆಫ್‌ಸ್ಕೂಲ್ಸ್‌ಗೆ ಖ್ಯಾತ ಕ್ರಿಕೆಟಿಗ ಯಜುವೇಂದ್ರ ಚಾಹಲ್ ಬ್ರ್ಯಾಂಡ್ ಅಂಬಾಸಿಡರ್



ಬೆಂಗಳೂರು,ಫೆ.9:ಪ್ರಾಯೋಗಿಕ ಕಲಿಕೆ ಮತ್ತು ಸಮಗ್ರ ಶಿಕ್ಷಣದಲ್ಲಿ ಮುಂಚೂಣಿಯಲ್ಲಿರುವ ಹಾಯ್-ಕಲ್ಪಾ ಗ್ರೂಪ್ ಆಫ್ ಸ್ಕೂಲ್ಸ್ ಗೆ ಭಾರತದ ಖ್ಯಾತ ಕ್ರಿಕೆಟಿಗ ಯಜುವೇಂದ್ರ ಚಾಹಲ್ ಪಾಲುದಾರ ಮತ್ತು ಬ್ರ್ಯಾಂಡ್ ಅಂಬಾಸಿಡರ್ ಆಗಿ ನೇಮಕಗೊಂಡಿದ್ದಾರೆ. ಈ ಸಹಭಾಗಿತ್ವವು ಶೈಕ್ಷಣಿಕ, ಶಿಸ್ತು ಮತ್ತು ಸರ್ವತೋಮುಖ ಅಭಿವೃದ್ಧಿಯಲ್ಲಿ ಶ್ರೇಷ್ಠತೆಗಾಗಿ ಹಾಯ್-ಕಲ್ಪಾದ ಬದ್ಧತೆಯನ್ನು ಇನ್ನಷ್ಟು ಬಲವರ್ಧನೆಗೊಳಿಸುತ್ತದೆ.

ಜಾಗತಿಕ ಕ್ರಿಕೆಟ್ ಲೋಕದ ಐಕಾನ್ ಮತ್ತು ಯುವ ಸಮುದಾಯಕ್ಕೆ ರೋಲ್ ಮಾಡೆಲ್ ಆಗಿ, ಶಾಲೆಯೊಂದಿಗೆ ಚಾಹಲ್ ಅವರ ಪಾಲುದಾರಿಕೆಯು ಕ್ರೀಡೆ-ಸಂಯೋಜಿತ ಕಲಿಕೆ, ನಾಯಕತ್ವ ಮತ್ತು ಪಾತ್ರ-ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಚಾಹಲ್ ಅವರು ವಿಶೇಷ ಸಭೆ ಮತ್ತು ಸನ್ಮಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ತಮ್ಮ ಪ್ರೇರಣಾದಾಯಕ ಮಾತುಗಳನ್ನಾಡಿದ ಅವರು, ಶಿಕ್ಷಣ ಮತ್ತು ಕ್ರೀಡೆಗಳು ಮಕ್ಕಳ ಭವಿಷ್ಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಶೈಕ್ಷಣಿಕ ಉತ್ಕೃಷ್ಟತೆ ಮತ್ತು ಉದಯೋನ್ಮುಖ ಕ್ರೀಡಾ ಪ್ರತಿಭೆಗಳನ್ನು ಪೋಷಿಸಲು ಬದ್ಧವಾಗಿರುವ ಸಂಸ್ಥೆಯಾಗಿರುವ ಹಾಯ್-ಕಲ್ಪಾ ಗ್ರೂಪ್ ಆಪ್ ಸ್ಕೂಲ್ಸ್ ಜೊತೆಗೆ ಸೇರಲು ನಾನು ಉತ್ಸುಕನಾಗಿದ್ದೇನೆ. ಭಾರತದಾದ್ಯಂತ ವಿದ್ಯಾರ್ಥಿಗಳನ್ನು ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಇದರ ಭಾಗವಾಗಿರುವುದನ್ನು ನಾನು ಎದುರು ನೋಡುತ್ತಿದ್ದೇನೆ ಎಂದು ತಿಳಿಸಿದರು.

ಹಾಯ್-ಕಲ್ಪಾ ಗ್ರೂಪ್ ಆಫ್ ಸ್ಕೂಲ್ಸ್ ನ ಸಂಸ್ಥಾಪಕ ಮತ್ತು ನಿರ್ದೇಶಕ ಶಾಲಿನಿ ಶರ್ಮಾ ಮತ್ತು ವಿಕಾಸ್ ಶರ್ಮಾ ಅವರು, ಮಾತನಾಡಿ.ಯುಜಯುವೇಂದ್ರ ಚಾಹಲ್ ಅವರು ಹಾಯ್-ಕಲ್ಪಾ ಅವರೊಂದಿಗಿನ ಒಡನಾಟವು ಯುವ ಮನಸ್ಸುಗಳನ್ನು ದೊಡ್ಡ ಕನಸನ್ನು ಕಾಣಲು, ಶ್ರಮವಹಿಸಿ ಕೆಲಸ ಮಾಡಲು ಮತ್ತು ಪ್ರತಿಯೊಂದು ಕ್ಷೇತ್ರದಲ್ಲೂ ಶ್ರೇಷ್ಠತೆ ಸಾಧಿಸಲು ಪ್ರೇರೇಪಣೆ ನೀಡುತ್ತದೆ" ಎಂದು ಅಭಿಪ್ರಾಯಪಟ್ಟರು.

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ-ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**-ಜಾಹೀರಾತು ವ್ಯವಸ್ಥಾಪಕರು**

# ಅಗಸ್ತ್ಯ ಇಂಟರ್‌ನ್ಯಾಷನಲ್ ಫೌಂಡೇಷನ್‌ನಿಂದ ಸೃಜನಶೀಲ ಮೇಳ

ಬೆಂಗಳೂರು.ಫೆ9:ಅಗಸ್ತ್ಯ ಇಂಟರ್‌ನ್ಯಾಷನಲ್ ಫೌಂಡೇಷನ್ ಆಯೋಜಿಸಿದ್ದ "ಆಹಾ ಕಲೆಕ್ಟಿವ್ 2025" ಉತ್ಸವದಲ್ಲಿ ಸೃಜನಶೀಲತೆ ಮತ್ತು ಆವಿಷ್ಕಾರ ಒಗ್ಗೂಡಿ ಮಕ್ಕಳ ಕಲಾ ಅಭಿವ್ಯಕ್ತಿಗೆ ವೇದಿಕೆ ಒದಗಿಸಲಿದೆ. 2,000ಕ್ಕೂ ಹೆಚ್ಚು ಸರ್ಕಾರಿ ಮಾಧ್ಯಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳು ಕಲೆ, ಛಾಯಾಗ್ರಹಣ, ಡಿಜಿಟಲ್ ಮಾಧ್ಯಮ ಮತ್ತು ವಾಸ್ತುಶಿಲ್ಪಗಳ ಮೂಲಕ ಯುವ ಮನಸ್ಸುಗಳಲ್ಲಿ ಆವಿಷ್ಕಾರ ಮತ್ತು ತಾಜಾ ಚಿಂತನೆಯನ್ನು ಬಿಂಬಿಸಲು ಸಾಧನವಾಗಿ ಬಳಸಲಿದ್ದಾರೆ. ಫೆಬ್ರವರಿ 12-13, 2025ರಂದು ದೊಮ್ಮಲೂರಿನ ಬೆಂಗಳೂರು ಇಂಟರ್‌ನ್ಯಾಷನಲ್ಲ ಸೆಂಟರ್ ನಲ್ಲಿ ನಡೆಯಲಿರುವ ಈ ಮೇಳೆವು ಸ್ಥಳೀಯ ಕಾಲೇಜು ವಿದ್ಯಾರ್ಥಿಗಳಿಂದ, ಅನುಭವಿ ಛಾಯಾಗ್ರಾಹಕರು ಮತ್ತು ವೃತ್ತಿಪರ ಕಲಾವಿದರಿಂದ ಕಾರ್ಯಾಗಾರಗಳು ಒಳಗೊಂಡಿರುತ್ತವೆ.

ವಿದ್ಯಾರ್ಥಿಗಳು ಹೇಗೆ ಸಾಂಪ್ರದಾಯಿಕ ಮತ್ತು ಆಧುನಿಕ ಕಲಾ ಮಾಧ್ಯಮಗಳನ್ನು ಹೊಸ ಬಗೆಯ ಆಲೋಚನೆಗಳನ್ನು ರೂಪಿಸಲು ಬಳಸಿಕೊಳ್ಳಲಾಗುತ್ತದೆ ಎಂದು ಆವಿಷ್ಕರಿಸುತ್ತಾರೆ. ಭಾಗವಹಿಸುವ ವಿದ್ಯಾರ್ಥಿಗಳು ಚಲನಚಿತ್ರಗಳು, ಛಾಯಾಚಿತ್ರಗಳು ಮತ್ತು ಕಥೆಗಳನ್ನು ಪ್ರದರ್ಶಿಸಲಿದ್ದು ಅವರ ಧ್ವನಿಗಳು ಮತ್ತು ಕಲಾತ್ಮಕ ಕೌಶಲ್ಯಗಳನ್ನು ಬಿಂಬಿಸಲಿದ್ದಾರೆ. "ಇಂದಿನ ತೀವ್ರವಾಗಿ ವಿಕಾಸಗೊಳ್ಳುತ್ತಿರುವ ವಿಶ್ವದಲ್ಲಿ ಸೃಜನಶೀಲತೆಯು ಕಲಾ ಕೌಶಲ್ಯಕ್ಕಿಂತ ಹೆಚ್ಚಿನದಾಗಿದೆ. ಇದು ಸಮಸ್ಯೆ ಪರಿಹರಿಸುವ ಮತ್ತು ಆವಿಷ್ಕಾರದ ಪ್ರಮುಖ ಅಂಶವಾಗಿದೆ" ಎಂದು ಅಗಸ್ತ್ಯ ಇಂಟರ್‌ನ್ಯಾಷನಲ್ ಫೌಂಡೇಷನ್ ಅಧ್ಯಕ್ಷ ರಾಮ್ಜಿ ರಾಘವನ್ ಹೇಳಿದರು.

"ಸಾಂಪ್ರದಾಯಿಕ ಕಲಾ ಮಾದರಿಗಳನ್ನು ಡಿಜಿಟಲ್ ಸಾಧನಗಳು ಮತ್ತು ಉದಯೋನ್ಮುಖ ತಂತ್ರಜ್ಞಾನಗಳೊಂದಿಗೆ ಸಂಯೋಜಿಸುವ ಮೂಲಕ ಈ ವಿದ್ಯಾರ್ಥಿಗಳಿಗೆ ಪ್ರಯೋಗ ನಡೆಸಲು, ಭಿನ್ನವಾಗಿ ಆಲೋಚಿಸಲು ಮತ್ತು ಅವರ ಕಲಿಕೆಯ ಎಲ್ಲ ಆಯಾಮಗಳಲ್ಲಿ ಆವಿಷ್ಕಾರ ಅಪ್ಪಿಕೊಳ್ಳಲು ಅವಕಾಶ ನೀಡುತ್ತದೆ ಎಂದರು.

**ರೆಸೊನೋಟ್:** ಅಗಸ್ತ್ಯದ ಧ್ವನಿ ಕಾರ್ಯಕ್ರಮದ ವಿದ್ಯಾರ್ಥಿಗಳು ಸೃಷ್ಟಿಸಿದ ಚಲನಚಿತ್ರಗಳು, ಫೋ-ಟೋ ಕಥೆಗಳು ಮತ್ತು ಡಿಜಿಟಲ್ ಮಾಧ್ಯಮ ಯೋಜನೆಗಳ ಪ್ರದರ್ಶನ **ರೀಮಿಕ್ಸ್:** ವೃತ್ತಿಪರ ಕಲಾವಿದರು ಹೊಸ ಕಲಾತ್ಮಕ ಅಭಿವ್ಯಕ್ತಿಗಳ ಮರು ಕಲ್ಪನೆ ಮತ್ತು ಪರಿವರ್ತನೆ ರಿಫ್ಲೆಕ್ಟ್: ವೃತ್ತಿಪರ ಕಲಾವಿದರ ಕಲೆಯ ಗ್ಯಾಲರಿಯಾಗಿದ್ದು ಅದು ವಿದ್ಯಾರ್ಥಿಗಳಿಗೆ ಸ್ಫೂರ್ತಿ ನೀಡಲಿದೆ. ಫೆ.12-13, ಸಮಯ: ಬೆಳಿಗ್ಗೆ 10.30ರಿಂದ 4.00 ಬೆಂಗಳೂರಿನ ದೊಮ್ಮಲೂರು ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ ಕಾರ್ಯಕ್ರಮ ಜರುಗಲಿದೆ.

## ಸುನಿಲ್ ಆ್ಯಗ್ರೋ ಫುಡ್ಸ್ ಲಿಮಿಟೆಡ್

**CIN: L01111KA1988PLC008861**

ನೋಂ. ಕಚೇರಿ: ಪ್ಲಾಟ್ ನಂ. 39-ಎ2, ಕೈಗಾರಿಕಾ ಪ್ರದೇಶ, ಚೊಕ್ಕಹಳ್ಳಿ, ಹೊಸಕೋಟೆ
ಕರ್ನಾಟಕ, 562 114, ದೂರವಾಣಿ: +91- 80- 27971371/ 27971463 । ವೆಬ್‌ಸೈಟ್: http://www.sunilagro.in

**ಡಿಸೆಂಬರ್ 31, 2024ಕ್ಕೆ ಕೊನೆಯಾದ ತ್ರೈಮಾಸಿಕದ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಸಾರಾಂಶ**

(ಅನ್ಯಥಾ ಹೇಳಿರದಿದ್ದರೆ ಷೇರು ಮತ್ತು ತಲಾ ಷೇರಿನ ದತ್ತ ಹೊರತುಪಡಿಸಿ ಉಳಿದಂತೆ ಲಕ್ಷ ರೂಗಳಲ್ಲಿ)

| ಕ್ರ. ಸಂ. | ವಿವರಗಳು | ಡಿಸೆಂಬರ್ 31, 2024ಕ್ಕೆ ಕೊನೆಯಾದ ತ್ರೈಮಾಸಿಕ (ಅಪರಿಶೋಧಿತ) | ಡಿಸೆಂಬರ್ 31, 2023ಕ್ಕೆ ಕೊನೆಯಾದ ಕಳೆದ ವರ್ಷದ ತತ್ಸಮ 3 ತಿಂಗಳು (ಅಪರಿಶೋಧಿತ) | 31.03.2024ಕ್ಕೆ ಕೊನೆಯಾದ ವರ್ಷ (ಪರಿಶೋಧಿತ) |
|---|---|---|---|---|
| 1 | ಕಾರ್ಯಾಚರಣೆಗಳಿಂದ ಒಟ್ಟು ಆದಾಯ (ಇತರೆ ಆದಾಯವೂ ಸೇರಿದಂತೆ) | 6,108.57 | 6,189.84 | 22,904.85 |
| 2 | ಸದರಿ ಅವಧಿಗೆ ನಿವ್ವಳ ಲಾಭ (ತೆರಿಗೆ ಮತ್ತು ಅಸಾಮಾನ್ಯ ಐಟಂಗಳನ್ನು ಕಳೆಯುವ ಮುನ್ನ) | (36.89) | 25.56 | 122.03 |
| 3 | ಸದರಿ ಅವಧಿಗೆ ತೆರಿಗೆಗೆ ಮುನ್ನ ನಿವ್ವಳ ಲಾಭ (ಅಸಾಮಾನ್ಯ ಐಟಂಗಳನ್ನು ಕಳೆದ ನಂತರ) | (36.89) | 25.56 | 114.97 |
| 4 | ಸದರಿ ಅವಧಿಗೆ ತೆರಿಗೆ ಕಳೆದ ನಂತರ ನಿವ್ವಳ ಲಾಭ (ಅಸಾಮಾನ್ಯ ಐಟಂಗಳನ್ನು ಕಳೆದ ನಂತರ) | (29.55) | 21.70 | 87.58 |
| 5 | ಸದರಿ ಅವಧಿಗೆ ಸಮಗ್ರ ಆದಾಯ [ಸದರಿ ಅವಧಿಗೆ ತೆರಿಗೆ ಕಳೆದ ನಂತರದ ಲಾಭ / (ನಷ್ಟ) ಮತ್ತು ತೆರಿಗೆ ಕಳೆದ ನಂತರದ ಇತರೆ ಸಮಗ್ರ ಆದಾಯ ಸೇರಿದಂತೆ] | (28.13) | 23.05 | 98.88 |
| 6 | ಇಕ್ವಿಟಿ ಷೇರು ಬಂಡವಾಳ (ಮುಖ ಬೆಲೆ ತಲಾ 10/- ರೂ.) | 300.30 | 300.30 | 300.30 |
| 7 | ಮೀಸಲುಗಳು (ಕಳೆದ ವರ್ಷದ ಬ್ಯಾಲೆನ್ಸ್ ಷೀಟಿನಲ್ಲಿ ತೋರಿಸಿರುವ ರೀವ್ಯಾಲ್ಯುಯೇಷನ್ ರಿಸರ್ವ್ ಬಿಟ್ಟು) | 1,289.15 | 1,399.30 | 1399.30 |
| 8 | ತಲಾ ಷೇರಿಗೆ ಗಳಿಕೆ (ಮುಖ ಬೆಲೆ ತಲಾ 10/- ರೂ.) | | | |
| | ಎ) ಮೂಲ | (0.98) | 0.72 | 2.92 |
| | ಬಿ) ಡೈಲ್ಯೂಟೆಡ್ | (0.98) | 0.72 | 2.92 |

*ಸದರಿ ಅವಧಿಗೆ ಮಾತ್ರ, ವಾರ್ಷಿಕೀಕರಿಸಿಲ್ಲ.

1. ಈ ಡಿಸೆಂಬರ್ 31, 2024ಕ್ಕೆ ಕೊನೆಗೊಂಡ ತ್ರೈಮಾಸಿಕದ ಅಪರಿಶೋಧಿತ ಆರ್ಥಿಕ ಫಲಿತಾಂಶಗಳನ್ನು ಕಂಪನಿಯ ನಿರ್ದೇಶಕ ಮಂಡಲಿಯು 07ನೇ ಫೆಬ್ರವರಿ, 2025ರಂದು ನಡೆದ ತನ್ನ ಸಭೆಯಲ್ಲಿ ಅನುಮೋದಿಸಿದೆ.
2. ಶಾಸನಬದ್ಧ ಲೆಕ್ಕ ಪರಿಶೋದಕರು ಅರ್ಹವಲ್ಲದ ಲೆಕ್ಕ ಪರಿಶೋದನೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.
3. ಕಂಪನಿಗಳ ಅಧಿನಿಯಮ, 2013ರ ಕಲಮು 133ನ್ನು ತಿದ್ದುಪಡಿಯಾದ ಕಂಪನಿಗಳ (ಇಂಡಿಯನ್ ಅಕೌಂಟಿಂಗ್ ಸ್ಟಾಂಡರ್ಡ್ಸ್) ನಿಯಮಗಳು, 2015 ಜೊತೆ ಓದಿಕೊಂಡ ಪ್ರಕಾರ ಇಂಡಿಯನ್ ಅಕೌಂಟಿಂಗ್ ಸ್ಟಾಂಡರ್ಡ್ಸ್ (ಇಂಡ್ ಎಎಸ್) ಅನುಸಾರ ಕಂಪನಿಯ ಆರ್ಥಿಕ ಫಲಿತಾಂಶಗಳನ್ನು ಸಿದ್ಧಪಡಿಸಲಾಗಿದೆ.
4. ಮೇಲೆ ನೀಡಿರುವುದು ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವ ಅಗತ್ಯತೆಗಳು) ನಿಬಂಧನೆಗಳು, 2015ರ ನಿಬಂಧನೆ 33 ಪ್ರಕಾರ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಿರುವ ತ್ರೈಮಾಸಿಕದ ಆರ್ಥಿಕ ಫಲಿತಾಂಶಗಳ ವಿಸ್ತೃತ ರೂಪದ ಸಾರಾಂಶವಾಗಿರುತ್ತದೆ. ಸದರಿ ತ್ರೈಮಾಸಿಕ ಆರ್ಥಿಕ ಫಲಿತಾಂಶಗಳ ವಿಸ್ತೃತ ನಮೂನೆಯು ಬಿಎಸ್‌ಇ ಲಿಮಿಟೆಡ್‌ನ www.bseindia.com ಮತ್ತು ಕಂಪನಿಯ www.sunilagro.in ವೆಬ್‌ಸೈಟ್‌ಗಳಲ್ಲಿ ಲಭ್ಯವಿರುತ್ತವೆ.

ನಿರ್ದೇಶಕರ ಮಂಡಳಿಯ ಆದೇಶದ ಮೇರೆಗೆ,
ಸುನಿಲ್ ಆ್ಯಗ್ರೋ ಫುಡ್ಸ್ ಲಿಮಿಟೆಡ್ ಪರವಾಗಿ
ಸಹಿ/-
ಪ್ರಮೋದ್‌ಕುಮಾರ್ ಎಸ್.
ಎಕ್ಸಿಕ್ಯುಟಿವ್ ಡೈರೆಕ್ಟರ್

ಸ್ಥಳ: ಬೆಂಗಳೂರು, ಭಾರತ
ದಿನಾಂಕ: 07-02-2025

## MILESTONE GLOBAL LIMITED

CIN: L93000KA1990PLC011082
54-B, HOSKOTE INDUSTRIAL AREA (KIADB), CHINTAMANI ROAD, HOSKOTE - 562 114
Website: www.milestonegloballimited.com | E-mail: alkasgl@yahoo.com.

**EXTRACT OF STANDALONE AND CONSOLIDATED UNAUDITED FINANCIAL RESULTS FOR QUARTER AND NINE MONTHS ENDED 31ST DECEMBER 2024**

( Rs. In Lakhs)

| Sl. No. | Particulars | STANDALONE | | | CONSOLIDATED | | |
|---|---|---|---|---|---|---|---|
| | | Three Months Ended | Nine Months Ended | Corresponding Three Months Ended | Three Months Ended | Nine Months Ended | Corresponding Three Months Ended |
| | | 31.12.2024 | 30.12.2024 | 31.12.2023 | 31.12.2024 | 31.12.2024 | 31.12.2023 |
| | | Unaudited | Unaudited | Unaudited | Unaudited | Unaudited | Unaudited |
| 1 | Total Income from Operations(Net) | 312.91 | 912.93 | 1,128.86 | 215.96 | 904.23 | 1,150.55 |
| 2 | Net Profit / (Loss) for the period before tax, Exceptional & Extrodinary items | 17.86 | 30.50 | 91.32 | (7.43) | 13.30 | 100.19 |
| 3 | Net Profit / (Loss) for the period before tax, after Exceptional & Extrodinary items | 17.86 | 30.50 | 91.32 | (7.43) | 13.30 | 100.19 |
| 4 | Net Profit / (Loss) for the period after tax, Exceptional & Extrodinary items | 17.98 | 30.62 | 88.67 | (7.31) | 13.42 | 97.54 |
| 5 | Total Comprehensive Income for the period (Comprising profit after tax and other comprehensive income) | 17.98 | 30.62 | 88.67 | (7.31) | 15.25 | 97.54 |
| 6 | Equity Share Capital (Face value of Rs.10/- Per share) | 501.75 | 501.75 | 501.75 | 501.75 | 501.75 | 501.75 |
| 7 | Earnings per share (of Rs.10/- each) (Not Annualized) In Rs. | | | | | | |
| | i Basic | 0.36 | 0.61 | 1.77 | (0.15) | 0.27 | 1.94 |
| | ii Diluted | 0.36 | 0.61 | 1.77 | (0.15) | 0.27 | 1.94 |

**Note:** The above is an extract of the detailed format of Quarterly and Nine Months Ended Financial Results filed with the Stock Exchange under Regulation 33 of the SEBI(Listing and Other Disclosure Requirements) Regulations, 2015.The Full Format of the Quarterly and Annual Financial Results are available on the Stock Exchange Website: www.bseindia.com

For and on behalf of the Board of Directors
Sd/-
ALOK KRISHNA AGARWAL
Chairman
DIN NO: 00127273

Place: Delhi
Date : 08-02-2025